ಕರ್ನಾಟಕ ಸರ್ಕಾರ

No.MWD/181/WES/2017

ಸರ್ಕಾರದ ಕಾರ್ಯದರ್ಶಿ,
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು
ವಕ್ಫ್ ಇಲಾಖೆ,
ವಿಕಾಸಸೌಧ, ಬೆಂಗಳೂರು
ದಿನಾಂಕ:12-12-2017

## ಸುತ್ತೋಲೆ

ವಿಷಯ:- ಕರ್ನಾಟಕ ರಾಜ್ಯದ ವಕ್ಫ್ ಮಂಡಳಿ, ಜಿಲ್ಲಾ ವಕ್ಫ್ ಸಲಹಾ ಸಮಿತಿ ಹಾಗೂ ವಂಶಪಾರಂಪರಿಕವಾಗಿ ನೇಮಿಸಲಾಗುವ ಮುತವಲ್ಲಿ ಮತ್ತು ವ್ಯವಸ್ಥಾಪನ ಸಮಿತಿಯ ಸದಸ್ಯರುಗಳು ಪ್ರಭಾರ ವಹಿಸುವ ವೇಳೆಯಲ್ಲಿ ಪ್ರಮಾಣ ವಚನ ಸ್ವೀಕರಿಸುವುದು ಕಡ್ಡಾಯಗೊಳಿಸುವ ಕುರಿತು.

ಉಲ್ಲೇಖ: 1) ವಕ್ಫ್ ತಿದ್ದುಪಡಿ ಕಾಯ್ದೆ, 2013ರ ಕಲಂ 97.
2) ವಕ್ಫ್ ತಿದ್ದುಪಡಿ ಕಾಯ್ದೆ, 2013ರ ಕಲಂ 101.

* * * * *

ರಾಜ್ಯದಾದ್ಯಂತ ಚುನಾಯಿತ ಪ್ರತಿನಿದಿಗಳು ಹಾಗೂ ನೇಮಕಗೊಂಡ ಎಲ್ಲಾ ಸರ್ಕಾರಿ ನೌಕರರು ಪ್ರಭಾರ ವಹಿಸುವ ವೇಳೆಯಲ್ಲಿ ಪ್ರಮಾಣವಚನ ಸ್ವೀಕರಿಸುವುದು ಕಾನೂನಾತ್ಮಕವಾಗಿ ಕಡ್ಡಾಯಗೊಳಿಸಲಾಗಿರುತ್ತದೆ. ಈ ಪ್ರಕ್ರಿಯೆಯನ್ನು ಸಾರ್ವಜನಿಕ ಕಾರ್ಯಗಳಲ್ಲಿ ನಿಷ್ಟೆ ಮತ್ತು ಪ್ರಾಮಾಣಿಕತೆಯಿಂದ ನಿರ್ವಹಿಸುವುದರಲ್ಲಿ ದೃಢಸಂಕಲ್ಪ ಮೂಡಿಸುವ ಉದ್ದೇಶವಾಗಿರುತ್ತದೆ. ನೈಜ ರೀತಿಯಲ್ಲಿ ಈ ಪ್ರಮಾಣವಚನ ಪಾಲಿಸಿದ್ದಲ್ಲಿ, ಸಾರ್ವಜನಿಕ ಕೆಲಸ ಕಾರ್ಯಗಳಲ್ಲಿ ಇಚ್ಛಾಶಕ್ತಿ, ಹೊಣೆಗಾರಿಕೆ ಮತ್ತು ಗುಣಮಟ್ಟವನ್ನು ಪ್ರದರ್ಶಿಸುವ ಸಂಭವಗಳು ಹೆಚ್ಚಾಗಿರುತ್ತವೆ.

ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು 300ಕ್ಕೂ ಹೆಚ್ಚು ಸಿಬ್ಬಂದಿಯು ಹೊಂದಿದ್ದು, ನಿಯಮಾನುಸಾರ ಪ್ರಭಾರ ವಹಿಸುವ ಸಮಯದಲ್ಲಿ ಉಚಿತವಾಗಿ ಪ್ರಮಾಣ ವಚನವನ್ನು ಸ್ವೀಕರಿಸುತ್ತಿದ್ದಾರೆ. ಉಲ್ಲೇಖ (2)ರ ಪ್ರಾವದಾನಗಳನ್ವಯ ಮಂಡಳಿಯ ಅಧೀನದಲ್ಲಿರುವ ಎಲ್ಲಾ ಸದಸ್ಯರು, ಅಧಿಕಾರಿಗಳು, ಲೆಕ್ಕ ತಪಾಸಕರು ಮತ್ತು ಯಾವುದೇ ವ್ಯಕ್ತಿಗೆ ಮಂಡಳಿಯು ನೇಮಿಸಿ ವಕ್ಫ್ ಕಾಯ್ದೆ ಮತ್ತು ಅದರ ಅಡಿಯಲ್ಲಿ ರಚಿಸಲಾಗಿರುವ ನಿಯಮಗಳಲ್ಲಿ ಕಾರ್ಯ ನಿರ್ವಹಿಸಲು ಸೂಚಿಸಲಾಗಿದಿಯೂ ಅವರೆಲ್ಲರು ಲೋಕ ಸೇವಕರೆಂಬುದಾಗಿ ಹಾಗೂ ಭಾರತೀಯ ದಂಡ ಸಂಹಿತೆಯ ಕಲಂ 21ರ ವ್ಯಾಪ್ತಿಗೆ ಒಳಪಡುವವರೆಂದು ಸೂಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಹಾಗೂ ಉಲ್ಲೇಖ (1)ರ ಪ್ರಾವದಾನಗಳಲ್ಲಿ ರಾಜ್ಯ ಸರ್ಕಾರ ವಕ್ಫ್ ಮಂಡಳಿಯ ಆಡಳತ ಸ್ಪಂದನಾತ್ಮಕವಾಗಿ ಮೂಡಿಸಲು ನಿರ್ದೇಶನ ನೀಡಬಹುದೆಂದಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ನಿರ್ದೇಶನ ನೀಡಲಾಗಿದೆ.

| ಕ್ರ. ಸಂ. | ಪ್ರಮಾಣ ವಚನ ಸ್ವೀಕರಿಸುವ ಸದಸ್ಯರುಗಳ ಪದನಾಮ | ಪ್ರಮಾಣ ವಚನ ಬೋಧಿಸುವವರ ಪದನಾಮ | ಪ್ರಮಾಣವಚನ ಸ್ವೀಕರಿಸುವ ಸ್ಥಳ |
|---|---|---|---|
| 01 | ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಸದಸ್ಯರನ್ನು ವಕ್ಫ್ ಕಾಯ್ದೆ ಕಲಂ 14(9) ರಲ್ಲಿ ನೇಮಕಾತಿ ಮಾಡಿದನಂತರ ಎಲ್ಲಾ ಚುನಾಯಿತ ಹಾಗೂ ನಾಮನಿರ್ದೇಶಿತ ಸದಸ್ಯರುಗಳು ಮತ್ತು ಆಡಳಿತಾಧಿಕಾರಿಗಳು | ಸರ್ಕಾರದ ಕಾರ್ಯದಶಿ/ಪ್ರಧಾನ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಇಲಾಖೆ | ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಸಭಾ ಭವನ |

ಪುಟ...2/-